ಸಚಿವನಾಗಿರುವುದರ ಜೊತೆಗೆ ಆತ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಪುನಾರಾಯ್ಕೆಯಾಗುವುದರಲ್ಲಿ ಸಂಶಯವಿಲ್ಲ. ಸಗಣಿ ಗುಡ್ಡೆಯನ್ನು ಉರುಳಲೆತ್ನಿಸುವ ಸಣ್ಣ ನೊಣದಂತೆ ವಿರೋಧ ಪಕ್ಷದವರ ಪ್ರಯತ್ನ ವ್ಯರ್ಥಸಾಹಸವಾಗಿದೆ.

ಹಿಂದಿನಂತೆ ಮುಂದಿನ ಚುನಾವಣೆಯಲ್ಲೂ ರೂಫ್ ಮಾನ್ಯ ಮಂತ್ರಿಗಳ ಸೇವೆಯಲ್ಲಿದ್ದಾನೆ. ಗ್ರಾಮ ಮಟ್ಟದಿಂದ ರಾಷ್ಟ್ರಮಟ್ಟದ ಸರ್ಕಾರ ಸ್ಥಾಪನೆಯ ಚುನಾವಣೆಯವರೆಗೂ ಚುನಾವಣಾ ಪ್ರಚಾರದಲ್ಲಿ ಪರಿಣತನಾಗಿದ್ದ ರೂಫ್ ಮತದಾರರ ನಾಡಿಮಿಡಿತವನ್ನು ಬಲ್ಲವನಾಗಿದ್ದ. ಕೆಲತಿಂಗಳ ಹಿಂದೆ ಮಾನ್ಯ ಮಂತ್ರಿಗಳಿಗೆ ಕಳೆದ ಚುನಾವಣೆಯಿಂದ ಈ ಚುನಾವಣೆಯಲ್ಲಿ ಜನ ತೀವ್ರ ಬದಲಾವಣೆಯಾಗಿರುವುದರ ಬಗ್ಗೆ ಎಚ್ಚರಿಕೆ ನೀಡಿದ್ದ.

ಐದು ವರ್ಷಗಳ ಅಲ್ಪ ಅವಧಿಯಲ್ಲಿ ತಮ್ಮ ಮಂತ್ರಿಗೆ ಸಂಪತ್ತು, ಕೀರ್ತಿ, ಬಿರುದು, ಡಾಕ್ಟರೇಟ್ ಪದವಿಗಳು ಬಂದಿರುವುದನ್ನು ಊರ ಜನ ಗಮನಿಸಿದ್ದಾರೆ. ಆ ಡಾಕ್ಟರೇಟ್ ಪದವಿಯಿಂದ ಕಾಯಿಲೆ ವಾಸಿ ಮಾಡುವ ವೈದ್ಯನಾಗಿರಬಹುದೆಂದು ಭಾವಿಸಿದ್ದಾರೆ. ಐದು ವರ್ಷದ ಹಿಂದೆ ಏನನ್ನು ಪಡೆಯದೆ ನೀಡಿದ ವೋಟಿನಿಂದಾಗಿ ಗೌರವ ಮತ್ತು ಲಾಭವನ್ನು ಪಡೆದ ವ್ಯಕ್ತಿಯಿಂದ ಈಗ ಬೇರೆಯದೆ ನಿರೀಕ್ಷೆಯಲ್ಲಿದ್ದಾರೆ.

ಈ ಹಿಂದೆ ಮಾರ್ಕಸ್ ಇಬೆ ಮಿಷನ್ ಸ್ಕೂಲ್‌ನಲ್ಲಿ ಅಂಥ ಒಳ್ಳೆಯ ಶಿಕ್ಷಕನೇನೂ ಆಗಿರಲಿಲ್ಲ. ಶಿಕ್ಷಕಿಯೊಬ್ಬರು ಅವನ ಮೇಲೆ ದೂರು ಕೊಟ್ಟಿದ್ದು ಆತ ಕೆಲಸದಿಂದ ವಜಾ ಆಗುವ ಸಂದರ್ಭದಲ್ಲಿ ಅವನ ಅದೃಷ್ಟಕ್ಕೆ ಚುನಾವಣೆ ಘೋಷಣೆಯಾಗಿ ಆತ ರಾಜಕೀಯ ಸೇರಿ ಈಗ ಮಾನ್ಯಮಂತ್ರಿ. ಅವನೀಗ ಎರಡು ಉದ್ದನೆಯ ಕಾರುಗಳ ಜೊತೆಗೆ ಆ ಸುತ್ತಮುತ್ತಲೂ ಕಾಣಸಿಗದ ವಿಶಾಲ ಬಂಗಲೆಯ ಒಡೆಯ. ಆದರೂ ಯಶಸ್ಸಿನ ಪಿತ್ತ ಆತನ ನೆತ್ತಿಗೇರಿಲ್ಲ. ತನ್ನ ಜನರನ್ನು ಪ್ರೀತಿ ವಿಶ್ವಾಸದಿಂದಲೇ ನೋಡುತ್ತಾನೆ. ಸೌಲಭ್ಯವಿರುವ ರಾಜಧಾನಿಯನ್ನು ಬಿಟ್ಟು, ನೀರು ವಿದ್ಯುತ್ ಇಲ್ಲದ ಹಳ್ಳಿಯಲ್ಲಿಯೇ ಇರುತ್ತಾನೆ. ತನ್ನ ಮನೆಗೆ ಖಾಸಗಿಯಾಗಿ ವಿದ್ಯುತ್ ಪಡೆದಿರುವುದು ಬೇರೆ ಮಾತು. ತನ್ನ ಹೊಸಮನೆಗೆ ಉಮೋಫಿಯಾ ಭವನವೆಂದು ಹೆಸರಿಸಿ ಅರ್ಚ್‌ಬಿಷಪ್‌ರನ್ನು ಕರೆಸಿ ಗೃಹಪ್ರವೇಶ ಮಾಡಿದ್ದಲ್ಲದೆ ಅಂದು ಐದು ಗೂಳಿ ಹಾಗೂ ಲೆಕ್ಕವಿಲ್ಲದಷ್ಟು ಟಗರುಗಳನ್ನು ಕಡಿದು ಭೋಜನ ಏರ್ಪಾಡಿಸಿದ್ದಾನೆ. ತನಗೆ ಆಹಾರ ದೊರೆತೊಡನೆ ಭೂಮಿಗೆ ಬೆನ್ನು ತೋರುವ ಫಿರಂಗಿಯಂತಲ್ಲ ಅವನು.

ಆದರೆ ಔತಣಕೂಟ ಮುಗಿದ ನಂತರ ಮತಪತ್ರದ ಶಕ್ತಿಯನ್ನು ಕಡೆಗಾಣಿಸಿದ್ದರ ಅರಿವು ಅವರಿಗಾಗಿದೆ. ಮಾರ್ಕಸ್ ಇಬೆಯೂ ಕೂಡಾ ಇದನ್ನು ಅರಿಯದವನಲ್ಲ. ಇದಕ್ಕಾಗಿ ತನ್ನ ಸಂಬಳವನ್ನು ಮುಂಗಡವಾಗಿ ಪಡೆದು ಪೌಂಡನ್ನು ಮುರಿಸಿ ಶಿಲ್ಲಿಂಗ್‌ಗಳಾಗಿ ಪರಿವರ್ತಿಸಿ ತನ್ನ ಪ್ರಚಾರದ ಹುಡುಗರಿಗೆ ಸುಂದರ ನಾರಿನ ಚೀಲದಲ್ಲಿ ಹಾಕಿ ಕಳುಹಿಸಿದ್ದಾನೆ. ಅವನು ಭಾಷಣ ಮಾಡಿ ಮುಗಿಸಿದ ನಂತರ ರಾತ್ರಿ ಆ ಪ್ರಚಾರಕರು ಪಿಸುಮಾತಿನ ಪ್ರಚಾರ ಮಾಡುತ್ತಿದ್ದಾರೆ. ಅವರಲ್ಲಿ ಅತೀ ನಂಬುಗೆಯ ಪ್ರಚಾರಕನೆಂದರೆ ರೂಫ್ ಅಲ್ಲದೆ ಮತ್ತಾರು.

ಆ ಊರಿನ ಪ್ರಮುಖ ಒಕೂಪೂಚಿ ಮನೆಯಲ್ಲಿ ಸೇರಿದ ಹಿರಿಯರ ಸಭೆಯಲ್ಲಿ ರೂಫ್ ಹೇಳಿದ, 'ನಮ್ಮ ಹಳ್ಳಿಯ ಮನೆಯ ಮಗ ಈಗ ಮಂತ್ರಿಯಾಗಿದ್ದಾನೆ. ಇದಕ್ಕಿಂತ ದೊಡ್ಡಗೌರವ ಮತ್ತೇನು ಬೇಕು. ಆ ಗೌರವದಿಂದ ಅವನನ್ನು ವಂಚಿತನಾಗಿ ಏಕೆ ಮಾಡಬೇಕು. ನೀವು ಓಟು ಹಾಕಿ ಇಲ್ಲವೆ ಬಿಡಿ, ಪಿ.ಎ.ಪಿ ಪಕ್ಷವೇ ಗೆದ್ದು ಆಡಳಿತ ನಡೆಸುವುದು. ನಮಗೆ ನಲ್ಲಿಯ ನೀರನ್ನು ನೀಡುವ ಭರವಸೆಯ ಬಗ್ಗೆ ಯೋಚನೆ ಮಾಡಿ.'